

ಸ್ವಯಂ ಪಕ್ಷಿ ಸಂಕುಲಗಳೇ ಇಲ್ಲಿನ ಜನರಿಗೆ ಅನ್ನ ನೀರು ಹಚ್ಚಡ ಕೊಟ್ಟು ಸಾಕುತ್ತಿವೆ. ಪುಟಾಣಿ ರೆಕ್ಕೆಗಳ, ಅಂಗೈ ಅಗಲದ ಗೂಡು ಕಟ್ಟುವ, ನಾಲ್ಕಾರು ಕಾಳು, ಒಂದಿಷ್ಟು ಹುಳಹುಪಟ ತಿನ್ನುವ ಮುದ್ದು ಹಕ್ಕಿಗಳೇ ಇಲ್ಲಿ ಮನುಷ್ಯರ ಕಾಪಾಡುತ್ತಿವೆ. ಈ ಊರಿನ ಜನರ ಜೀವನವನ್ನು ಜತನದಿಂದ ಸಾಕುವ ಅವ್ವ, ಅಪ್ಪ ಎಲ್ಲಾ ಆಗಿವೆ.

ಸತ್ತಾಲಿಗೆ ಒಟ್ಟು ನಾವು ನಾಲ್ಕು ಜನ ಫೋಟೊಗ್ರಫಿಗಾಗಿ ಬಂದಿದ್ದೆವು. ಹೀಗೆ ಆಗಮಿಸಿದ ಒಬ್ಬರೂ ಶಿಸ್ತಿನ ಮನುಷ್ಯರೇ ಅಲ್ಲ ಎಂಬುದು ಗಮನಾರ್ಹ ಸಂಗತಿ. ಸೋಂಬೇರಿತನ ಮತ್ತು ಮೈಗಳ್ಳತನದಲ್ಲಿ ಒಬ್ಬರಿಗೊಬ್ಬರು ಪರಸ್ಪರ ಪೈಪೋಟಿ ಕೊಡಬಲ್ಲಷ್ಟು ಸದೃಢರಾಗಿದ್ದೆವು. ಒಬ್ಬರು ಮತ್ತೊಬ್ಬರಿಗೆ ಆಗಾಗ ಎಚ್ಚರಿಕೆ ಕೊಡುವುದರಲ್ಲಿ, ಬುದ್ಧಿ ಹೇಳುವುದರಲ್ಲಿ, ರೂಲ್ಸ್ ಪ್ರೇಮು ಮಾಡುವುದರಲ್ಲಿ ಎಕ್ಸ್ಪರ್ಟ್‌ಗಳಾಗಿದ್ದೆವು. ಯಾವ ನಿಯಮವನ್ನು ಸ್ವಯಂ ಪಾಲಿಸಲು ಯಾರಿಗೆ ಸಾಧ್ಯವಿಲ್ಲವೋ; ಅದನ್ನವರು ಇತರರಿಗೆ ಅಚ್ಚುಕಟ್ಟಾಗಿ ಉಪದೇಶ ಮಾಡುತ್ತಿದ್ದರು.

ಅದರಲ್ಲೂ ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ರೆಡಿಯಾಗುವ ಕೆಲಸ ಮಾತ್ರ ಒಂದು ದಿನವೂ ಪರಿಪಾಲನೆಯಾಗಲಿಲ್ಲ. ಫೋಟೊಗ್ರಫಿಯಲ್ಲಿ ಸಮಯ ಪಾಲನೆ, ಶಿಸ್ತು, ಪರಿಕರಗಳ ಪೂರ್ವ ಸಿದ್ಧತೆ ಮುಖ್ಯವೆಂದು ತಾಕೀತು ಮಾಡುವ ಹೊರಗಿನವರು ನಮ್ಮ ಪಾಲಿಗೆ ಶತ್ರು ಸಮಾನರಿದ್ದಂತೆ! ಕೇವಲ ಇನ್ನೊಬ್ಬರ ತಪ್ಪುಗಳ ಕಂಡು ಎತ್ತಾಡುವುದರಲ್ಲಿ ಪ್ರವೀಣರಾಗಿದ್ದ ನಾವು ನಮ್ಮೊಳಗೆ ಎಂದೂ ಇಣುಕಿಯೂ ನೋಡಿದವರಲ್ಲ.

ಆದರೆ ನಮಗೆ ನಿಗದಿಯಾಗಿದ್ದ ನ್ಯಾಚುರಲಿಸ್ಟ್ ಅಂಕಿತ್ ದಾಸ್ ಲೋಯಿವಾಲ್ ಎಂಬ ಸುಂದರ ತರುಣ ಪಕ್ಕಾ ಸಮಯ ಪಾಲನೆಯ ಹುಡುಗ. ಆತ ಯಾವತ್ತೂ ಬೆಳಿಗ್ಗೆ ಸಂಜೆ ತಡ ಮಾಡಿ ಬರಲಿಲ್ಲ. ಗಂಟೆ ಮುಳ್ಳಂತೆ ಬಂದು ನಿಂತು ರೂಮಿನ ಕದ ತಟ್ಟುತ್ತಿದ್ದ. ನಗುಮುಖದ ಆತ ಮಹಾಮೌನಿ ಕೂಡ. ಅಪರೂಪಕ್ಕೆ ಒಮ್ಮೊಮ್ಮೆ ಸಂಪೂರ್ಣವಾಗಿ ಮನಬಿಚ್ಚಿ ನಗುತ್ತಿದ್ದ. ಆಗ ಮಾತ್ರ ಗಾಂಜಾ ಸೇದಿಸೇದಿ ಕಪ್ಪಿಡಿದ ಅವನ ಹಲ್ಲುಗಳ ಪೂರಾ ನೋಡಬಹುದಿತ್ತು.

‘ಈ ವಯಸ್ಸಿಗೇ ಈನಾಡಿ ಹಲ್ಲುಗಳ ತುಕ್ಕಿಡಿಸಿಕೊಂಡು ಕರಿಕಿಟ್ಟ ಮಾಡ್ಕೊಂಡಿದ್ದೀಯಲ್ಲ ಅಂಕಿತ್. ನಿಂಗೆ ಯಾರು ಮುಂದೆ ಹೆಣ್ಣು ಕೊಡುತ್ತಾರೋ’ ಎಂದು ರೇಗಿಸುತ್ತಿದ್ದೆ. ಆಗವನು ‘ಇಲ್ಲಿನ ಹುಡ್ಗೀರು ಈ ಸ್ಟೈಲೇ ಇಷ್ಟಪಡುತ್ತಾರೆ ಸರ್’ ಎಂದು ಬೊಗಳೆ ಹೊಡೆಯುತ್ತಿದ್ದ. ಅವನಿಗೆ ಸರಿಸಮನಾಗಿ ಎಲೆಯಡಿಕೆ ಜಗಿಯುತ್ತಿದ್ದ ನಾನು ಅವನಿಗೆ ಆಗಾಗ ಬುದ್ಧಿಮಾತು ಹೇಳುತ್ತಿದ್ದದ್ದು ಹೆಚ್ಚು ತಮಾಷೆಯಾಗಿಯೂ ವಿಚಿತ್ರವಾಗಿಯೂ ಕಾಣುತ್ತಿತ್ತು.

ಸ್ಮಿತಾ ಎಂಬ ಆ ಸುಂದರಿ ದಾಂಡೇಲಿಯಲ್ಲಿ ತೋರಿಸಿ ಹುಚ್ಚು ಹಚ್ಚಿದ್ದ ರಕ್ತಬಣ್ಣದ ಸ್ಕರ್ಲೆಟ್ ಪಿಂಚ್ ಎಂಬ ಬಣ್ಣದ ಪಕ್ಷಿಯನ್ನು “ಮೊದಲು ತೋರಿಸು ಮಾರಾಯ” ಎಂದು ಅಂಕಿತನ ಬೆನ್ನು ಬಿದ್ದಿದ್ದೆ. ಅವನು ಆಯಿತೆಂಬತೆ ನಕ್ಕು ಸುಮ್ಮನಾಗುತ್ತಿದ್ದ. ಎರಡು ದಿನ ಕಳೆಯುವುದರೊಳಗೆ ಮನುಷ್ಯ ನಿರ್ಮಿತ ಹೈಡುಗಳು (ಮರೆ ಮಾಡಿಕೊಂಡು ಪಕ್ಷಿಗಳ ಚಿತ್ರ ತೆಗೆಯುವ